2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 9/2021

| | | |
|---|---|---|
| ಸಾಕ್ಷಿದಾರರ ಹೆಸರು | - ತಿಮ್ಮಪ್ಪ | ಪಿಡಬ್ಲೂ -04 |
| ತಂದೆಯ ಹೆಸರು | - ಪುಟ್ಟರಾಜು | ಸಿಡಬ್ಲೂ -06 |
| ವಯಸ್ಸು | - 35 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ನಿಡಘಟ್ಟ | |

ದಿನಾಂಕಃ 30.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆಕೆ ನನ್ನ ಹೆಂಡತಿ. ಮೃತ ಮಗು ಪ್ರೀತಮ್ ನನ್ನ ಮಗ. ಚಾಸಾ.1 ನನ್ನ ತಾಯಿ. ಫ್ರಾಸಾ.3 ನನ್ನ ತಂದೆ. ಫ್ರಾಸಾ.1 ಮತ್ತು ಫ್ರಾಸಾ.2 ರವರು ಗೊತ್ತು. ಚಾಸಾ.7 ಮತ್ತು ಚಾಸಾ.8 ರವರು ಗೊತ್ತು.

2. ನಾನು ನಿಡಘಟ್ಟದಲ್ಲಿ ವಾಸವಾಗಿದ್ದು, ಸದರಿ ಗ್ರಾಮದಲ್ಲಿರುವ ನಮ್ಮ ಸ್ವಂತ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದೇನೆ. ನನ್ನ ಮತ್ತು ಆರೋಪಿಯ ಮದುವೆ ಈಗ್ಗೆ 13 ವರ್ಷಗಳ ಹಿಂದೆ ನಡೆದಿತ್ತು. ನಮಗೆ ಮೂರು ಜನ ಮಕ್ಕಳು. ಅವರೆಂದರೆ ಶೋಭಾ, ಲಿಖಿತ ಮತ್ತು ಪ್ರೀತಮ್. ನಮ್ಮ ಮೊದಲನೇ ಮಗಳು ಶೋಭಾ ಈಗ್ಗೆ 11 ವರ್ಷಗಳ ಹಿಂದೆ ಆಕೆಗೆ 6 ರಿಂದ 8 ತಿಂಗಳಾಗಿದ್ದಾಗ ನಮ್ಮ ಮನೆಯಲ್ಲಿ ತೊಟ್ಟಿಲಿನಲ್ಲಿಯೇ ಉಸಿರುಗಟ್ಟಿ ಮೃತಪಟ್ಟಿತ್ತು.

3. ಈಗ್ಗೆ 5 ವರ್ಷಗಳ ಹಿಂದೆ ನಾನು ನನ್ನ ತಾಯಿಯೊಂದಿಗೆ ಜಗಳ ಮಾಡಿಕೊಂಡು ಬೆಂಗಳೂರಿಗೆ ಕೆಲಸಕ್ಕೆಂದು ಹೋಗಿದ್ದೆನು. ಆಗ ಒಂದು ದಿನ ನನ್ನ ತಾಯಿ ನನಗೆ ಫೋನ್ ಮಾಡಿ ನನ್ನ ಮಗ ಪ್ರೀತಮ್ ಕಾಣೆಸುತ್ತಿಲ್ಲವೆಂದು ಹೇಳಿದರು. ನಂತರ ನಾನು ಬೆಂಗಳೂರಿನಿಂದ ಹೊರಟು ರಾತ್ರಿ 12.00 ಗಂಟೆಗೆ ತರೀಕೆರೆಗೆ ಹೋದೆನು. ನನ್ನ ತಾಯಿ ತರೀಕೆರೆ ಬಸ್ ನಿಲ್ದಾಣದಲ್ಲಿ ಇದ್ದರು. ಅವರು ನನ್ನ ಮಗ ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಇರುವುದಾಗಿ ಹೇಳಿ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ನನ್ನ ಮಗ ಮೃತಪಟ್ಟಿದ್ದನು. ಆಗ ಆತನಿಗೆ 6 ತಿಂಗಳಾಗಿತ್ತು.

4. ನನ್ನ ಮಗ ಪ್ರೀತಮ್ ಹೇಗೆ, ಯಾವ ಕಾರಣಕ್ಕೆ ಯಾರಿಂದ ಮೃತಪಟ್ಟಿದ್ದನು ಎಂದು ನನಗೆ ಗೊತ್ತಿಲ್ಲ. ನನ್ನ ಹೆಂಡತಿ ತರೀಕೆರೆ ಪೊಲೀಸ್ ಠಾಣೆಯಲ್ಲಿ ಇದ್ದಳು. ಆದರೆ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ.

5. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ಶವ ನನ್ನ ಮಗ ಪ್ರೀತಮ್ ನದ್ದು ಎಂದು ನುಡಿದಿರುತ್ತಾರೆ. ಆಸ್ಪತ್ರೆಯಲ್ಲಿ ಯಾವುದೇ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನ್ನ ಹೆಂಡತಿಯಿಂದ ನನ್ನ ಮಗನಿಗೆ ಯಾವುದೇ ತೊಂದರೆಯಾಗಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

6. ದಿನಾಂಕ 05.11.2019 ರಂದು ನನ್ನ ಹೆಂಡತಿಯಾದ ಆರೋಪಿ ಕಮಲ ಬೆಳಿಗ್ಗೆ 10.00 ಗಂಟೆಗೆ ನನ್ನ ಮಗ ಪ್ರೀತಮ್ ನನ್ನು ಬಸವೇಶ್ವರ ಆಸ್ಪತ್ರೆಯಿಂದ ತೆಗೆದುಕೊಂಡು ಅವಳಿಗೆ ಅರಿವಿಲ್ಲದೇ ತರೀಕೆರೆಯ ಹಳಿಯೂರು ಸೇತುವೆಯ ಭದ್ರಾ ಕಾಲುವೆಯಲ್ಲಿ ಯಾರೋ ಹೆಂಗಸು ಕಾಲುವೆಯ ಮಧ್ಯದಲ್ಲಿ ನೀರಿನಲ್ಲಿ ನಿಂತು ಮಗು ನನಗೆ ಕೊಡು ಮಗುವಿನ ಆರೋಗ್ಯವನ್ನು ನಾನು ಸರಿಪಡಿಸುತ್ತೇನೆ ಎಂದು ಕೇಳಿದ್ದಕ್ಕೆ ಆಕೆ ಮಗುವನ್ನು ಅವಳ ಕೈಗೆ ಕೊಟ್ಟಂತೆ ಭಾವಿಸಿ ಮಗುವನ್ನು ಭದ್ರಾ ನಾಲೆಯ ನೀರಿಗೆ ಹಾಕಿ ಸಾಯಿಸಿರುವ ವಿಚಾರವನ್ನು ನನ್ನ ತಾಯಿ ರತ್ನಮ್ಮ ನನ್ನ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ತಿಳಿದು ನಾನು ಬೆಂಗಳೂರಿನಿಂದ ಹೊರಟು ನನ್ನ ಮಗುವಿನ ಮೃತ ದೇಹವನ್ನು ಇಟ್ಟಿದ್ದ ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಬಂದಿದ್ದೇನೆ ಎಂದರೆ ಸರಿಯಲ್ಲ.

7. ನನಗೆ ಮತ್ತು ಆರೋಪಿಗೆ ಮೊದಲಿಗೆ ಜನಿಸಿದ್ದ ಹೆಣ್ಣು ಮಗುವಿಗೆ 11 ತಿಂಗಳಾಗಿದ್ದಾಗ ಅದು ರಾತ್ರಿ ತೊಟ್ಟಿಲಿನಲ್ಲಿ ಚೆನ್ನಾಗಿ ಮಲಗಿತ್ತು, ಬೆಳಿಗ್ಗೆ ಎದ್ದು ನೋಡಿದಾಗ ಮಗು ತೊಟ್ಟಿಲಿನಲ್ಲಿಯೇ ಮೃತಪಟ್ಟಿತ್ತು, ಆ ದಿನದಿಂದ ಆರೋಪಿಯ ಆರೋಗ್ಯದಲ್ಲಿ ವ್ಯತ್ಯಾಸವಾಗಿತ್ತು, ಮಗು ಸತ್ತ ಬಗ್ಗೆ ಮಾನಸಿಕವಾಗಿ ಆಕೆ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿಯಲ್ಲ. ನಂತರ ನಮಗೆ ಲಿಖಿತ ಜನಿಸಿದ್ದು ನಾನು ಸದರಿ

ಮಗು ಮತ್ತು ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಊರಿನಲ್ಲಿಯೇ ಇದ್ದರು ಎನ್ನುತ್ತಾರೆ. ನಂತರ ಲಿಖಿತ ಮಹಡಿಯಿಂದ ಕೆಳಗೆ ಬೀಳುತ್ತಾಳೆ ಎಂಬ ಭಯದಿಂದ ಆರೋಪಿ ಮಾನಸಿಕ ಗಾಬರಿಯಲ್ಲಿದ್ದ ಕಾರಣ ನಾನು ಸದರಿ ವಿಚಾರವನ್ನು ನನ್ನ ತಂದೆ ತಾಯಿಗೆ ತಿಳಿಸಿದಾಗ ಅವರು ಲಿಖಿತಾಳನ್ನು ನಿಡಘಟ್ಟದಲ್ಲಿರುವ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಂತರ ನಮಗೆ ಪ್ರೀತಮ್ ಹುಟ್ಟಿದ ನಂತರ ಆರೋಪಿಯನ್ನು ಬಾಣಂತನಕ್ಕೆಂದು ನಿಡಘಟ್ಟದಲ್ಲಿರುವ ನನ್ನ ತಂದೆ ತಾಯಿಯವರೊಂದಿಗೆ ಬಿಟ್ಟಿದ್ದೆನು ಎಂದರೆ ಸರಿ.

8. ದಿನಾಂಕ 04.11.2019 ರಂದು ಪ್ರೀತಮ್ ಗೆ ಶೀತ, ಕೆಮ್ಮಿನಿಂದ ಉಸಿರಾಟದ ತೊಂದರೆಯಾಗಿ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಅದೇ ದಿನ ಆರೋಪಿ ಮತ್ತು ನನ್ನ ತಾಯಿ ಆತನನ್ನು ತರೀಕೆರೆಯ ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲಿಸಿದ್ದರು ಎಂದರೆ ಸರಿಯಲ್ಲ. ಆ ಮಧ್ಯೆ ಪ್ರೀತಮ್ ಅನಾರೋಗ್ಯದಿಂದ ತುಂಬಾ ಅಳುತ್ತಿದ್ದರಿಂದ ಆಗಾಗಲೇ ಮಾನಸಿಕವಾಗಿ ಕುಗ್ಗಿದ್ದ ಆರೋಪಿ ಆತನನ್ನು ಸಮಾಧಾನಪಡಿಸಲು ತರೀಕೆರೆ ಪಟ್ಟಣದಿಂದ ಬರೀ ಕಾಲಿನಲ್ಲಿ ಬೀರೂರು ಕಡೆಗೆ ನಡೆದುಕೊಂಡು ಹೋಗಿದ್ದು, ತರೀಕೆರೆಯ ಹಳಿಯೂರು ಸೇತುವೆಯ ಭದ್ರಾ ಕಾಲುವೆಯಲ್ಲಿ ಯಾರೋ ಹೆಂಗಸು ಕಾಲುವೆಯ ಮಧ್ಯದಲ್ಲಿ

ನೀರಿನಲ್ಲಿ ನಿಂತು ಮಗು ನನಗೆ ಕೊಡು ಮಗುವಿನ ಆರೋಗ್ಯವನ್ನು ನಾನು ಸರಿಪಡಿಸುತ್ತೇನೆ ಎಂದು ಕೇಳಿದ್ದಕ್ಕೆ ಆಕೆ ಮಗುವನ್ನು ಅವಳ ಕೈಗೆ ಕೊಟ್ಟಂತೆ ಭಾವಿಸಿ ಮಗುವನ್ನು ಭದ್ರಾ ನಾಲೆಯ ನೀರಿಗೆ ಹಾಕಿ ಸಾಯಿಸಿರುತ್ತಾಳೆ ಎಂದರೆ ಸರಿಯಲ್ಲ.

9. ಆರೋಪಿ ಮಾನಸಿಕ ಖಿನ್ನತೆಯಲ್ಲಿ ನನ್ನ ಮಗನನ್ನು ಭದ್ರಾ ನಾಲೆಯ ನೀರಿಗೆ ಹಾಕಿ ಸಾಯಿಸಿರುತ್ತಾಳೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ದಿನಾಂಕ 05.11.2019 ರಂದು ಪೊಲೀಸರು ಶವ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

10. ಆರೋಪಿ ನಿಮ್ಮ ಮಗನನ್ನು ಭದ್ರಾ ನಾಲೆಯ ನೀರಿಗೆ ಹಾಕಿ ಸಾಯಿಸಿದ್ದರೂ ಸಹ ಆಕೆ ನಿಮ್ಮ ಹೆಂಡತಿಯಾಗಿರುವ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದಃ ಆರೋಪಿ ಪರವಾಗಿ</u>

11. ಬಾಣಂತನದ ಸಮಯದಲ್ಲಿ ನನ್ನ ಹೆಂಡತಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದು ಆ ಬಗ್ಗೆ ನನ್ನ ತಾಯಿ ಆಕೆಗೆ ಚಿಕಿತ್ಸೆಯನ್ನು ಕೊಡಿಸಿದ್ದರು ಎಂದರೆ ಸರಿ. ಮೂರು ಮಕ್ಕಳು ಜನಿಸಿದ ಸಂದರ್ಭದಲ್ಲಿಯೂ ಸಹ ಆರೋಪಿ ಬಾಣಂತನದ ಸಮಯದಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿ. ಪ್ರೀತಮ್ ಜನಿಸಿದ ಸಂದರ್ಭದಲ್ಲಿಯೂ ಸಹ ಆರೋಪಿ

ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿ. ಆ ಸಮಯದಲ್ಲಿ ಮಕ್ಕಳನ್ನು ನಿಮ್ಮ ತಾಯಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ